ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ಮುಂಡರಗಿ ತಾಲ್ಲೂಕಿನ ಹಮ್ಮಿಗಿ ಏತ ನೀರಾವರಿ ಯೋಜನೆಯು ಉದ್ದೇಶಿತ ಅಚ್ಚುಕಟ್ಟು ೨೧೧ ಹೆಕ್ಟೇರುಗಳಾಗಿದ್ದು ಇದರಲ್ಲಿ ೨೨೦ ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ ಅಚ್ಚುಕಟ್ಟುದಾರರು ತಮ್ಮ ಜಮೀನನ್ನು ಮಟ್ಟ ಮಾಡಿಕೊಳ್ಳದಿರುವುದರಿಂದ ಈ ಜಮೀನು ಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಸಾಧ್ಯವಾಗಿಲ್ಲ.

ಮುಂಡರಗಿ ತಾಲ್ಲೂಕಿನ ರಾಟಿ ಏತ ನೀರಾವರಿ

೮೮೩. ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ನೀರಾವರಿ ಮತ್ತು ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಧಾರವಾಡ ಜಿಲ್ಲಾ ಮುಂಡರಗಿ ತಾಲ್ಲೂಕಿನಲ್ಲಿರುವ ರಾಟೀ ಏತ ನೀರಾವರಿ ಯೋಜನೆಯು ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಈ ಯೋಜನೆಯ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ಮತ್ತು (ಆ) ಈ ಯೋಜನೆಗೆ ತುಂಗಭದ್ರಾ ಜಲಾಶಯದಲ್ಲಿ ನೀರಿನ ಲಭ್ಯತೆ ಇಲ್ಲದಿರುವುದರಿಂದ ಈ ಯೋಜನೆಯನ್ನು ಕೈ ಬಿಡಲಾಗಿದೆ.

ಮುಂಡರಗಿ ತಾಲ್ಲೂಕಿನ ಏತ ನೀರಾವರಿಗಳ ಸಂಖ್ಯೆ

೮೮೪. ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಮುಂಡರಗಿ ತಾಲ್ಲೂಕಿನಲ್ಲಿರುವ ಏತ ನೀರಾವರಿಗಳ ಸಂಖ್ಯೆ ಎಷ್ಟು ? ಹಾಗೂ ಎಷ್ಟು ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ದೊರೆಯುತ್ತಿದೆ.

(ಆ) ಯಾವ ಯಾವ ಏತ ನೀರಾವರಿಗಳಿಂದ ಎಷ್ಟೆಷ್ಟು ಹೆಕ್ಟೇರು ಭೂಮಿ ನೀರಾವರಿಯಾಗುವುದು.

(ಇ) ಕಕ್ಕೂರ ಏತ ನೀರಾವರಿ ಎರಡನೇ ಹಂತ ಎಂದಿನಿಂದ ಪ್ರಾರಂಭವಾಗುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ಮತ್ತು (ಆ) ಮುಂಡರಗಿ ತಾಲ್ಲೂಕಿನಲ್ಲಿ ಐದು ಏತ ನೀರಾವರಿ ಯೋಜನೆಗಳು ಇವೆ. ಇವುಗಳಿಂದ ೧೯೬೨ ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ವಿವರಗಳು ಈ ರೀತಿ ಇವೆ.

ಕ್ರಮ ಸಂಖ್ಯೆ	ಏತ ನೀರಾವರಿ ಯೋಜನೆಯ ಹೆಸರು	ನೀರಾವರಿ ಪ್ರದೇಶ ಹೆಕ್ಟೇರುಗಳಲ್ಲಿ
೧.	ಕಕ್ಕೂರ ಏತ ನೀರಾವರಿ ಯೋಜನೆ ೧ನೇ ಹಂತ	೨೬೩
೨.	ಸಿಂಗಟಾಲೂರು ಏತ ನೀರಾವರಿ ಯೋಜನೆ	೧೦೫೬
೩.	ವಿಟಲಾಪುರ ಏತ ನೀರಾವರಿ ಯೋಜನೆ	೯೭
೪.	ಹಮ್ಮಿಗಿ ಏತ ನೀರಾವರಿ ಯೋಜನೆ	೨೧೧
೫.	ಕೊರಲಹಳ್ಳಿ ಏತ ನೀರಾವರಿ ಯೋಜನೆ	೩೬೫
	ಒಟ್ಟು	೧೯೬೨ ಹೆಕ್ಟೇರುಗಳು

(ಇ) ಈ ಯೋಜನೆಯನ್ನು ೧೯೬೦ರ ಸೆಪ್ಟೆಂಬರ್ ಕೊನೆಯ ವೇಳೆಗೆ ಪ್ರಾರಂಭಿಸಲು ಯೋಜಿಸಲಾಗಿದೆ.